(2) ವರದಕ್ಷಿಣೆ ಕೇಳುವವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ವರದಕ್ಷಿಣೆ ಪಿಡುಗಿಗೆ ಹೆಣ್ಣು ಮಕ್ಕಳು ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು ಈ ಪ್ರಕರಣಗಳು ಪ್ರತಿದಿನವೂ ಪತ್ರಿಕೆಗಳಲ್ಲಿ ಓದುವುದು ದಿನಚರಿಯಾಗಿದೆ. ವರದಕ್ಷಿಣೆಯನ್ನು ತಡೆಗಟ್ಟಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿರುವುದು ನಿಜ ಕೈಗೊಂಡಿರುವ ಕ್ರಮಗಳು ಪ್ರಚಾರ ಸಾಧನಗಳ ಮೂಲಕ ಹಳ್ಳಿಹಳ್ಳಿಗೂ ಮುಟ್ಟುವುದು ಅತ್ಯಗತ್ಯ. ಇದ್ದರಿಂದ ಸರ್ಕಾರವೂ ಇಡೀ ಕರ್ನಾಟಕದಲ್ಲಿ ವರದಕ್ಷಿಣೆ ವಿರೋಧಿ ಸಪ್ತಾಹ (ವಾರವನ್ನಾಗಿ) ಮುಂದು ಮಾಡಿ ಜನರಲ್ಲಿ ಜಾಗೃತಿ ಉಂಟು ಮಾಡಬೇಕು. ಈಗ ಇರುವ ಕಾನೂನುಗಳನ್ನು ಪಿದ್ದುಪಡಿ ಮಾಡಿ ಮದುವೆಗೆ ಮುಂಚೆಯೇ ವರದಕ್ಷಿಣೆ ಒತ್ತಾಯಿಸಿರುವವರನ್ನು ಶಿಕ್ಷೆಗೆ ಒಳಪಡಿಸಲು ಮದುವೆ ಆದಮೇಲೆ ವರದಕ್ಷಿಣೆಗೆಗಾಗಿ ಮುಹಿಳೆಯರನ್ನು ಆಪತ್ತಿಗೆ ಉಂಟು ಮಾಡುವವರ ಮೇಲೆ ಈಗ ಇರುವುದಕ್ಕಿಂತ ಉಗ್ರ ಕ್ರಮಗಳನ್ನು ಕೈಗೊಳ್ಳುವಂತೆ ಕಾನೂನುಗಳನ್ನು ಮಾಡಬೇಕೆಂದು ಸಂಬಂಧಪಟ್ಟ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಳಪಣ್ಣಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು).—

ವರದಕ್ಷಿಣೆ ಪದ್ಧತಿಯನ್ನು ಸಾಮಾಜಿಕ ಪಿಡುಗೆಂದು ಪರಿಗಣಿಸಲಾಗಿದೆ. ಕೇಂದ್ರ ಸರ್ಕಾರವು ೧೯೬೪ರ ತಿದ್ದುಪಡಿಯಂದ ವರದಕ್ಷಿಣೆ ನಿಷೇದ ಕಾಯಿದೆಯನ್ನು ದಿನಾಂಕ ೨-೧೦-೧೯೫೯ರಿಂದ ಜಾರಿಗೆ ತಂದಿತು. ಈ ತಿದ್ದುಪಡಿಯಾದ ಕಾಯಿದೆಯಲ್ಲಿ ವರದಕ್ಷಿಣೆ ಶಾಸನವನ್ನು ಮುರಿಯುವವರ ವಿರುದ್ಧ ಹೆಚ್ಚಿನ ಕಠಿಣ ಕ್ರಮಗಳನ್ನು ಅಳವಡಿಸಲಾಗಿದೆ. ಈ ತಿದ್ದುಪಡಿ ಕಾಯಿದೆಯನ್ನು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಪ್ರಚಾರಗೊಳಿಸಲಾಗಿದೆ.

ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಮತದ ಮಠಾಧಿಪತಿಗಳಿಗೂ ಹಾಗೂ ಸಂಘ ಸಂಸ್ಥೆಗಳ ಮುಖ್ಯಸ್ಥರಿಗೂ ಪತ್ರಗಳನ್ನು ಬರೆದು ಈ ಕಾಯಿದೆಗೆ ಅವರ ಬೆಂಬಲ ಹಾಗೂ ಸಹಕಾರವನ್ನು ಕೋರಿದ್ದಾರೆ ಈ ಬಗ್ಗೆ ಅವರಿಂದ ಬಂದ ಉತ್ತರಗಳು ತುಂಬಾ ಉತ್ತೇಜನಕಾರಿಯಾಗಿದೆ. ರಾಜ್ಯ ಸರ್ಕಾರವು ವರದಕ್ಷಿಣೆ ನಿಷೇದ ಕಾಯಿದೆ ಪ್ರಕಾರ ಬರುವ ದೂರುಗಳನ್ನು ಪೋಲೀಸ್ ಠಾಣೆಯಲ್ಲಿ ದಾಖಲೆಗೊಳಿಸಲು ಅನೇಕ ಸ್ವಯಂಸೇವಾ ಸಂಸ್ಥೆಗಳನ್ನು ಪ್ರಕಟಿಸಿದೆ. ಸಮಾಜ ಕಲ್ಯಾಣ ಇಲಾಖೆಯು ಈ ಕಾಯಿದೆ ಬಗ್ಗೆ ಮುಹಿಳೆಯರಿಗೆ ತಿಳುವಳಿಕೆ ನೀಡಲು ಹಳ್ಳಿಗಳಲ್ಲಿ ಸಭೆಗಳನ್ನು ಏರ್ಪಡಿಸುತ್ತಿದೆ.

೧೯೮೬-೮೭ನೇ ಸಾಲಿನಲ್ಲಿ ಇಲಾಖೆಯು ಈ ಕಾಯಿದೆಗೆ ಪ್ರಚಾರ ನೀಡುವ ಉದ್ದೇಶಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ವಿಚಾರ ಸಂಕಿರಣ ಮತ್ತು ಕಾರ್ಯಗಾರಗಳನ್ನು ಏರ್ಪಡಿಸಲಾಗುತ್ತದೆ ಈ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ಅಕ್ಟೋಬರ್ ೧೯೮೬ರಿಂದ ಪ್ರಾರಂಭಿಸಲಾಗುವುದು. ರಾಜ್ಯದ ಕಾನೂನು ಸಲಹಾ ಮಂಡಳಿಯ ಪತಿಯಿಂದ ವರದಕ್ಷಿಣೆಯ ತೊಂದರೆಗೆ ಒಳಗಾದವರಿಗೆ ಕಾನೂನು ಸಲಹೆ ನೀಡಲಾಗುತ್ತಿದೆ.

ಲೋಕ ಸಭೆಯಲ್ಲಿ ವರದಕ್ಷಿಣೆ ಕಾನೂನನ್ನು ಹೆಚ್ಚು ಬಲಯುತಗೊಳಿಸಲು ತಿದ್ದುಪಡಿ ಮಂಡಿಸುವುದಾಗಿ ವೃತ್ತ ಪತ್ರಿಕೆಗಳಲ್ಲಿ ವರದಿಯಾಗಿದೆ ಕರ್ನಾಟಕ ರಾಜ್ಯ ಸರ್ಕಾರವು ಈ ಕಾಯಿದೆಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಜಾರಿಗೆ ತರಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

(3) Confirmation of local candidates working as temporary lecturers of Mysore University.

SMT. MUKTHARUNNISA —The local candidates *viz.*, Temporary Lecturers of the Mysore University have been put to hardships by keeping them unusually long periods of more than 10–16 years of service without confirmation. Thus the University has misused its autonomy. The principles of natural justice in Karnataka is in jeopardy.

The local candidates are losing all their benefits meant for permanent staff of the University. Some of the local candidates are highly qualified with First Rank, First Class, Gold Medals and Ph.D. Degrees.

Hence I urge the Government to confirm them in their respective posts as has been done in the case of local candidates by directing University of Mysore and other Universities if there are any such cases to adopt the Government Notification No. DPAR 49 SLC 84(ii) dated 2nd July 1986.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರುಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ ೧-೮-೧೯೮೬ರಂದು ಸಭೆ ಸೇರಿ ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸರ್ಕಾರಿ ಪ್ರಕಟಣೆ ಸಂಖ್ಯೆ/ಡಿಪಿಎಆರ್/೪೯ ಎಸ್‌ಎಲ್‌ಸಿ ೮೪ (೧) ದಿನಾಂಕ ೨-೭-೮೬ರ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ನೌಕರ ವರ್ಗಕ್ಕೂ ವಿಸ್ತರಿಸಲು ಅನುಕೂಲ ವಾಗುವಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ ೧೯೭೭ಕ್ಕೆ ತಿದ್ದುಪಡಿ ಮಾಡಬೇಕೆಂದು ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ತೀರ್ಮಾನಿಸಿರುವುದಾಗಿ ತಿಳಿದುಬಂದಿದೆ. ಈ ಪ್ರಸ್ತಾವನೆ ಬಂದ ನಂತರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(4) Posting of doctor's to Bhaghamandala and other vacant Places in Coorg District.

SRI D. A. CHINNAPPA.—Kodagu is a small District having the population of 4.5. Lakhs for the last 4 years, at Bhagamandala a Doctor's post is vacant. There are 9 Doctor posts vacant at present. Being the Malnad area it is very difficult for the people to go to Headquarters hospital. Due to non-availability of Doctors in the rural hospitals the people are put into great and irrepairable loss and hardships.

There are so many requests made to post Doctors to the vacant posts. But it is all in vain. Hence I urge the Government to post doctors immediately to Kodagu District.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿರತಕ್ಕಂಥ ವೀರಾಜಪೇಟೆಯ ಆಸ್ಪತ್ರೆಯಲ್ಲಿ ಒಬ್ಬರು ಸರ್ಜನ್ ಇದ್ದಾರೆ. ಡೆಪ್ಯುಟಿ ಸರ್ಜನ್ಸ್ ನಾಲ್ಕು ಹುದ್ದೆಗಳು ಮಂಜೂರಾಗಿದ್ದು ಅಲ್ಲಿ ಈಗ ಹಾಲಿ ಕೆಲಸ ಮಾಡುತ್ತಿರುವವರು ಇಬ್ಬರು. ಇನ್ನು ಎರಡು ಹುದ್ದೆಗಳು ಖಾಲಿ ಇವೆ. ಮತ್ತು ಸಹಾಯ ಶಸ್ತ್ರ ಚಿಕಿತ್ಸಾಧಿಕಾರಿಗಳ ಹುದ್ದೆಗಳು ಮಂಜೂರಾಗಿರುವುದು ೩. ಇದರಲ್ಲಿ ಈಗ ಹಾಲಿ ಕೆಲಸ ಮಾಡುತ್ತಿರುವವರು ನಾಲ್ಕು ಜನರು. ಇನ್ನು ಎರಡು ಹುದ್ದೆಗಳು ಖಾಲಿ ಇವೆ. ಸೋಮವಾರಪೇಟೆ ಆಸ್ಪತ್ರೆಯಲ್ಲಿ ಒಬ್ಬರು ಸರ್ಜನ್ ಇದ್ದು ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಡೆಪ್ಯುಟಿ ಸರ್ಜನ್ಸ್ ಎರಡು ಹುದ್ದೆಗಳು ಇದ್ದು ಒಂದು ಹುದ್ದೆ ಖಾಲಿ ಇದೆ. ಒಬ್ಬರು ಕೆಲಸ ಮಾಡುತ್ತಿದ್ದಾರೆ. ಮತ್ತು ಸಹಾಯಕ ಶಸ್ತ್ರ ಚಿಕಿತ್ಸಾಧಿಕಾರಿಗಳ ಹುದ್ದೆಗಳು ೫ ಇದ್ದು ಹಾಲಿ ಮೂರು ಜನರು ಕೆಲಸ ಮಾಡುತ್ತಿದ್ದಾರೆ. ಇನ್ನು ಎರಡು ಹುದ್ದೆಗಳು ಖಾಲಿ ಇವೆ. ಈಗ ೧೯೮೬ಕ್ಕೆ ಒಬ್ಬ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡಿದ್ದೇವೆ. ಇನ್ನು ಪ್ರಾಥಮಿಕ ಆರೋಗ್ಯಾಧಿಕಾರಿ ಹುದ್ದೆಗಳು ೩ ಇದ್ದು ಅದರಲ್ಲಿ ೨ ಹುದ್ದೆಗಳು ಖಾಲಿ ಇವೆ.

ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡಿದ್ದರೂ ಅವರು ಕೆಲಸಕ್ಕೆ ಹಾಜರಾಗಿಲ್ಲ. ಮತ್ತೊಂದು ವೈದ್ಯಾಧಿಕಾರಿಯನ್ನು ತೈನಾತಿ ಮಾಡಿದೆ. ಅವರು ಕೂಡ ಇನ್ನೂ ಹಾಜರಾಗಿಲ್ಲ.